doc-609
T-P-2

Reg No B G 155 19 12 72

In The State First Golden Jubilee Celebrated Paper 'Satyavadi' daily, Mysore 4

ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂವೇರಿಸಿದ
ಪತ್ರಿಕೆ



56th Year of Publication

★

News, Views, Dharmic Moral Ethical Matters

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಮೈಸೂರು ಸರ್ಕಾರ ಪೂರ್ಣಾವಧಿ ಇರಬೇಕು

ಸಿಂಹಾಸನ

17 ನೇ ಶತಮಾನದಲ್ಲಿ ಮೊಗಲ್ ಚಕ್ರವರ್ತಿ ಷಹಜಹಾನ್ ಮಾಡಿಸಿದ್ದ ಮಯೂರ ಸಿಂಹಾಸನವು ಆ ಕಾಲದಲ್ಲಿ 6 ಮಿಲಿಯ ಪೌಂಡು ಅಥವಾ ರೂ 6 ಕೋಟಿ ಬೆಲೆ ಬಾಳತಕ್ಕದ್ದಾಗಿದ್ದ ಸಿಂಹಾಸನದಲ್ಲಿ ಅನೇಕ ಹಂಡ್ರೆಡ್‌ವೇಟ್ ಚಿನ್ನ ಅಪೇಕ್ಷಕ ಕೊಳಗಗಳ ರತ್ನಗಳೊ ಸೇರಿತ್ತು. ಈಗಿನ ಲೆಕ್ಕಾಚಾರದಲ್ಲಿ ಅದು ಕಡೇ ಪಕ್ಷ ರೂ 120 ಕೋಟಿ ಬೆಲೆ ಬೆಳತಕ್ಕದ್ದಾಗಿದೆ. ಇದು ಮೊಗಲರ ಖಜಾನೆಯಲ್ಲಿ ಅತಿ ಬೆಲೆಬಾಳುವ ಆಭರಣವಾಗಿತ್ತು. ನಾದಿರಷಾಹನು ಡೆಲ್ಲಿಯನ್ನು 1737 ರಲ್ಲಿ ಮುತ್ತಿ ಈ ಐತಿಹಾಸಿಕ ಪ್ರಸಿದ್ಧ ಸಿಂಹಾಸನವನ್ನು ತೆಗೆದುಕೊಂಡುಹೋದನು. ನಂತರ ಪರ್ಷಿಯಾದಲ್ಲಿನ ಹೋರಾಟಗಳಲ್ಲಿ ಈ ಸಿಂಹಾಸನದಲ್ಲಿಯ ಬೆಲೆ ಬಾಳುವ ವಸ್ತುಗಳೆಲ್ಲವೂ ಅಪಹರಿಸಲ್ಪಟ್ಟವು. ನಂತರ 18 ನೇ ಶತಮಾನದಲ್ಲಿದ್ದ ಅಲ್ಲಿ ಯ ಪಾರವರು ಮೂಲ ಸಿಂಹಾಸನದ ಎಲ್ಲಾ ಭಾಗೆಗಳನ್ನೂ ಸೇರಿಸಿ, ಪರ್ಷಿಯಾ ರೀತಿಯಲ್ಲಿ ಸಿಂಹಾಸನ ತಯಾರ್ಮಾಡಿಸಿದರು.

ಭಾರತದ ಪ್ರಖ್ಯಾತ ಸಿಂಹಾಸನಗಳಲ್ಲಿ ಮೈಸೂರು ಮಹಾರಾಜರವರ ಸಿಂಹಾಸನವು ಪ್ರಥಮಸ್ಥಾನ ಹೊಂದಿದೆ: ಇದು ಪಾಂಡವರ ಸಿಂಹಾಸನವೆಂದು ಒಬ್ಬ ಇತಿಹಾಸಕಾರನೂ, ವಿಕ್ರಮಾದಿತ್ಯನದೆಂದು ಮತ್ತೊಬ್ಬನೂ ಹೇಳುತ್ತಾರೆ. ಅದು ಭೋಜರಾಜನಿಗೆ ಒಂದು ಗುಹೆಯಲ್ಲಿ ಸಿಕ್ಕಿತೆಂದೂ, ಅವನ ಕಾಲಾನಂತರ ಆದರ ವಿಷಯ ಗೊತ್ತಾಗಲಿಲ್ಲವೆಂದೂ ಹೇಳಲಾಗಿದೆ. 16 ನೇ ಶತಮಾನದಲ್ಲಿ ವಿಜಯನಗರದ ರಾಜ್ಯಾಡಳಿತ ಕಾಲದಲ್ಲಿ ಶ್ರೀ ವಿದ್ಯಾರಣ್ಯರು ಈ ಸಿಂಹಾಸನವನ್ನು ಪತ್ತೇ ಮಾಡಿ, ವಿಜಯನಗರ ಅರಸರ ಸಿಂಹಾಸನವನ್ನಾಗಿ ಮಾಡಿದರು. ವಿಜಯನಗರ ರಾಜ್ಯವು ಪತನಮಾಪ್ತಿಗೊಂಡ ಕಾಲದಲ್ಲಿ ಮೈಸೂರು ರಾಜರಿಗೆ 1609 ರಲ್ಲಿ ದೊರೆಯಿತು ಮೈಸೂರು ರಾಜ್ಯದ ಅಡಳಿತ ವಹಿಸಿಕೊಂಡ ಹೈದರ್, ಈ ಸಿಂಹಾಸನದಲ್ಲಿ ಹಿಂದೂದೇವತೆಗಳು ಕೆತ್ತಲ್ಪಟ್ಟಿದ್ದರಿಂದ, ಉಪಯೋಗಿಸಲಿಲ್ಲವೆನ್ನಲಾಗಿದೆ. ಬ್ರಿಟಿಷರು ಟಿಪ್ಪುವನ್ನು ಸೋಲಿಸಿದಾಗ ಇದು ಶ್ರೀರಂಗಪಟ್ಟಣದ ಅರಮನೆಯಲ್ಲಿ ನಿರುಪಯೋಗ ವಸ್ತುಗಳನ್ನು ತುಂಬುವ ಕೊಠಡಿಯಲ್ಲಿತ್ತಂತೆ. ಆಗಿನಿಂದ ಮೈಸೂರು ರಾಜರ ಅಧೀನದಲ್ಲಿದ್ದು, ಮತ್ತೂ ಒಳ್ಳೊಳ್ಳೇ ರತ್ನಗಳಿಂದ ಅಲಂಕರಿಸಲ್ಪಟ್ಟಿವೆ

ಟಿಪ್ಪುವಿನ "ಹುಲಿ ಸಿಂಹಾಸನವು" ಗಮನಾರ್ಹವು ಇದರಲ್ಲಿ ಎರಡು ಸಿಡುಗುಟ್ಟುವ ಹುಲಿಗಳು ಕೆತ್ತಲ್ಪಟ್ಟಿವೆ. ಟಿಪ್ಪುವು 1799 ರಲ್ಲಿ ಯುದ್ಧದಲ್ಲಿ ಮೃತಪಟ್ಟಾಗ, ಬ್ರಿಟಿಷರು ಯುದ್ಧದ ಕೊಳ್ಳೆಯಾಗಿ ತೆಗೆದುಕೊಂಡುಹೋದರು.

ತಿರುವಾಂಕೂರು ರಾಜ್ಯವು ಅನೇಕ ದಂತ ಸಿಂಹಾಸಗಳನ್ನು ಹೊಂದಿದೆ; ಅತಿ ಸುಂದರ ಕೆತ್ತನೆ ಕೆಲಸದಿಂದ ಕೂಡಿದ್ದ ದಂತ ಸಿಂಹಾಸನವನ್ನು ತಿರುವಾಂಕೂರು ಮಹಾರಾಜರು ಬ್ರಿಟಿಷರಿಗೆ ಬಹುಮಾನಿಸಿದ್ದು, ಇದು ಲಂಡನ್ ವಿಕ್ಟೋರಿಯಾ ಮತ್ತು ಆಲ್ಬರ್ಟ್ ಮ್ಯೂಸಿಯಂನಲ್ಲಿ ಪ್ರದರ್ಶಿಸಲಾಗಿದೆ ಅಂತಹ ಒಂದು ಸಿಂಹಾಸನವನ್ನು 1950ರಲ್ಲಿ ತಿರುವಾಂಕೂರು ಮಹಾರಾಜರು ಭಾರತಾಧ್ಯಕ್ಷರಾಗಿದ್ದ ಡಾ|| ರಾಜೇಂದ್ರ ಪ್ರಸಾದ್‌ರಿಗೆ ಬಹುಮಾನಿಸಿದರು. ತಿರುವಾಂಕೂರು ರಾಜಗನಿಲಾಸ ಅರಮನೆಯಲ್ಲಿ 200 ವರ್ಷಗಳ ಹಿಂದಿನ ಸುಂದರ ಸಿಂಹಾಸನವಿದೆ.

ಶಿವಾಜಿ ಮಹಾರಾಜರು ಉಪಯೋಗಿಸುತ್ತಿದ್ದ ಸಿಂಹಾಸನಕ್ಕಾಗಿ ಪ್ರಖ್ಯಾತ ರಾಜಘಡವಲ್ಲಿ ಪ್ರಾಚೀನ ವಸ್ತು ಶೋಧನೆ ಇಲಾಖೆ ಪರಿಶೋಧನೆ ನಡೆಸುತ್ತಿದೆ.

["ಇಂಡಿಯನ್ ಎಕ್ಸ್‌ಪ್ರೆಸ್" ನಿಂದ ಅನುವಾದ]

ಸರ್ಕಾರ ಪೂರ್ಣಾವಧಿ ಇರಲಿ

ಬೆಂಗಳೂರು— ಸರಕಾರವನ್ನು ಉಳುಳಿಸುವ ಯೋಚನೆ ವಿರೋಧ ಪಕ್ಷಕ್ಕಿಲ್ಲವೆಂದೂ, ಈ ಮಂತ್ರಿಮಂಡಲ ಪೂರ್ಣಾವಧಿ ಇರಲೆಂಬುದು ತಮ್ಮ ಆಶಯವೆಂದೂ ವಿರೋಧ ನಾಯಕ ಶ್ರೀ ರಾಮಕೃಷ್ಣ ಹೆಗ್ಡೆಯವರು ವಿಧಾನ ಪರಿಷತ್ತಿನಲ್ಲಿ ಹೇಳಿದರು.

★

ಮಾಫ್

ವಿಶ್ವಸಂಸ್ಥೆ— ಚೀನಾಕ್ಕೆ ವಿಶ್ವಸಂಸ್ಥೆಗೆ ಕೊಡಬೇಕಾಗಿದ್ದ 28 6 ಮಿಲಿಯ ಡಾಲರು (ರೂ 21 ಕೋಟಿ) ಸಾಲವನ್ನು ಮಾಫ್ ಮಾಡಲಾಯಿತು.

○

ದೇವರ ಸಹಾಯಕ್ಕಾಗಿ ಕ್ಷೀರಾಭಿಷೇಕ

ಶ್ರೀ ಕಾಳಹಸ್ತಿ— ವಿದ್ಯಾರ್ಥಿಗಳ ಜಂಟಿ ಕ್ರಿಯಾಸಮಿತಿ ಮುಲ್ಕಿ ವಿರುದ್ಧ ತಮ್ಮ ಚಳವಳಿಗೆ ಶಿವ ದೇವರ ಅನುಗ್ರಹ ಪಡೆಯಲು ಶನಿವಾರ ಕ್ಷೀರಾಭಿಷೇಕ ಮಾಡಿಸಿದರು – ಈ ತಿಂಗಳೆಲ್ಲಾ ಅಭಿಷೇಕ ಮಾಡಿಸಲಾಗುತ್ತಿರುತ್ತೆ.

●

ಮುಲ್ಕಿ ಮಸೂದೆ

ನವದೆಹಲಿ — ಲೋಕಸಭೆಯಲ್ಲಿ ತಂದ ಮುಲ್ಕಿ ರೂಲ್ಸ್ ಮಸೂದೆಯನ್ನು, ಅನೇಕ ಸದಸ್ಯರು ವಿರೋಧಿಸಿದ್ದರಿಂದ—ಸ್ಪೀಕರರು ಅದನ್ನು ಮುಂದಕ್ಕೆ ಹಾಕಿದರು.

●

ಮೈಸೂರು ಪುರಸಭೆ

ಮೈಸೂರು— ಪುರಸಭೆಯ ಅಡಳಿತ ಗಾರರಾಗಿ ವಿಭಾಗಾಧಿಕಾರಿಗಳನ್ನು ನೇಮಿಸಲಾಗುವುದೆಂದು ಗೊತ್ತಾಗಿದೆ – 35 ಸದಸ್ಯರುಗಳ ಈಗಿನ ಸಭೆಯ ಅವಧಿಯು ಈ ತಿಂಗಳ ತಾ|| 31 ಕ್ಕೆ ಮುಗಿಯುತ್ತದೆ

ಎಂ ಪಿ ಸಿ ಸಿ ಅಧ್ಯಕ್ಷತೆ

ಬೆಂಗಳೂರು— ಶ್ರೀ ಕೆ. ಹೆಚ್. ರಂಗನಾಥ್‌ರವರು ಪುನಃ ಎಂ.ಪಿ.ಸಿ.ಸಿ. ಅಧ್ಯಕ್ಷರಾಗಿ ಸರ್ವಾನುನ್ನತದಿಂದ ಆಯ್ಕೆಯಾದರು.

★

ಸ್ವಾರಸ್ಯ ಸುದ್ದಿ

ವಾಷಿಂಗ್ಟನ್— ಬಂಗ್ಲಾದೇಶವು ಪಾಕಿಸ್ತಾನದ ಗೋಧಿಯನ್ನು ಕೊಂಡುಕೊಳ್ಳುವುದೆಂದು ವಾಷಿಂಗ್ಟನ್ ಪೋಸ್ಟ್ ಪತ್ರಿಕೆ ಪ್ರಕಟಿಸಿದೆ.

○

ಗ್ರಾಮಾಧಿಕಾರಿಗಳ ಅರ್ಜಿ

ನವದೆಹಲಿ— ಮೈಸೂರು ರಾಜ್ಯದ ಶ್ರೀ ಹೆಚ್. ಕೆ. ಗೋಪಾಲರಾವ್ ಮತ್ತಿತರ ಗ್ರಾಮಾಧಿಕಾರಿಗಳು ಸುಪ್ರೀಂ ಕೋರ್ಟ್‌ನಲ್ಲಿ ಹಾಕಿರುವ ರಿಟ್ ಅರ್ಜಿಯನ್ನು ಏಕೆ ಡಿಸ್ಮಿಸ್ ಮಾಡಬಾರದೆಂದು ಶೋಕಾಸ್ ನೋಟೀಸು ಮೈಸೂರು ಸರಕಾರಕ್ಕೆ ಕೊಡಲಾಗಿದೆ.

★

ಹೀಗೆ ಸಾವು ನಡೆದಿದೆಯೆ !

ನವದೆಹಲಿ— ಗಾಜಿಬಾದಿನಲ್ಲಿ ನವೆಂಬರು 26 ರಂದು ದಸ್ತಗಿರಿ ಮಾಡಲ್ಪಟ್ಟು ಪೋಲೀಸು ಸ್ಟೇಷನ್‌ನಲ್ಲಿ ಇಡಲಾಗಿದ್ದ ಹರಿಜನ ಹುಡುಗನು, ಹೇಗೆ ಸೀಮೆಎಣ್ಣೆ ಪಡೆದ, ಹೇಗೆ ಮೈಗೆಲ್ಲಾ ಎಣ್ಣೆ ಸುರಿದುಕೊಂಡ, ಹೇಗೆ ಬೆಂಕಿಕಡ್ಡಿ ಸಿಕ್ಕಿಸಿಕೊಂಡು ಸುಟ್ಟುಕೊಂಡ, ಎಂಬ ವಿಷಯವಾಗಿ ಲೋಕಸಭೆಯಲ್ಲಿ ಸರಕಾರದಿಂದ ತೃಪ್ತಿಕರವಾದ ಉತ್ತರ ಬರದಿರಲು ಸಭೆಯಲ್ಲಿ ಗೊಂದಲವಾಯಿತು.

★

ಆದಾಯ ತೆರಿಗೆ ಬಾಕಿ

ಬೆಂಗಳೂರು— 66 67 ರಿಂದ ಈ ವರ್ಷ ಮಾರ್ಚ್ ವರೆಗೆ ರೂ. 6 5 ಕೋಟಿ ಆದಾಯ ತೆರಿಗೆ ಬಾಕಿ ಎಂದು ವಿಧಾನ ಪರಿಷತ್ತಿನಲ್ಲಿ ತಿಳಿಸಲಾಯಿತು.

ನುಣ್ಣಿಗೆ ಕೌರ್ಪವಾಡಿಸಿರುವ ಆಚಾರ್ಯ ಭಾವೆ

ವಾರ್ಧಾ— ಪುನಂ ಆಶ್ರಮಕ್ಕೆ ಗೌರ್ನರ್ ಶ್ರೀಮನ್ನಾರಾಯಣರೂ ಮತ್ತು ಗುಜರಾತು ವಿಶ್ವವಿದ್ಯಾನಿಲಯದ ಉಪಕುಲಪತಿ ಈಶ್ವರಭಾಯಿ ಪಟೇಲರು ಹೋದಾಗ ಆಚಾರ್ಯ ವಿನೋಬ ಭಾವೆಯವರು ನುಣ್ಣಿಗೆ ಕ್ಷೌರಮಾಡಿಸಿಕೊಂಡಿರುವದನ್ನು ಕಂಡು ಆಶ್ಚರ್ಯಗೊಂಡು, ಕಾರಣ ಕೇಳಿದಾಗ ತಮ್ಮ ಡಿಲಿಟ್ ಶುದ್ಧಿಗೊಂಡಿತು ಎಂದು ಹೇಳಿದರು.

★

ಯೋಗಿಯ ಒಳ್ಳೆ ಯೋಗ

ತ್ರಿಚೂರು— ಊರು ಮಧ್ಯದಲ್ಲಿ ತೆಕ್ಕಿನಕಾಡ್ ಮೈದಾನದಲ್ಲಿ ಬೆಲದ ಮರದ ಕೆಳಗೆ ಒಬ್ಬ ಸೆಣಕಲ ಮನುಷ್ಯ ಹಸಿದಿರುವಂತೆ ಕಾಣುತ್ತಾ ಬಿದ್ದನಂತೆ. ಆದರ ಬಿಸಿಲ ಮಳೆಯೆನ್ನದೆ ಕುಳಿತಿದ್ದನು – ಶನಿವಾರ ಸಂಜೆ ನಾಗರಿಕರು ಅವನಲ್ಲಿ ಕರುಣೆ ತಳೆದರು – ಆದರೆ ಭಾನುವಾರ ಒಂದು ಕಾರ್ ನಲ್ಲಿ ಬಿಳಿ ಉಡುಪು ಧರಿಸಿ ಬಂದಿಳಿದನು – ಅವನನ್ನು ಕಂಡು ಜನರು ಆನಂದಭರಿತರಾದರು – ಯಾರೋ ಅವನನ್ನು ತಮ್ಮ ಮನೆಗೆ ಆತನ ಆಶೀರ್ವಾದ ಪಡೆಯಲು ಕರೆದುಕೊಂಡು ಹೋದಿದ್ದುದೂ ಗೊತ್ತಾಯಿತು – ಎತ್ತರವಾದ ವೇದಿಕೆ ಮೇಲೆ ಕೂರಿಸಿ ' ಯೋಗಿ " ಪಟ್ಟಕಟ್ಟಿದರು – ಈತನು ಧ್ಯಾನ ಮಸ್ತಲ್ಲಕ ಭಗವಂತನನ್ನು ಹುಡುಕುವುದು ತನ್ನ ಜೀವಿತದ ಕಾರ್ಯವಾಗಿರುವದೆನ್ನಲಾಗಿದೆ

★

ಬೆಂಗಳೂರು ಕಾರ್ಪೊರೇಷನ್

ಬೆಂಗಳೂರು— ಸರಕಾರದ ಸೂಚನೆಗಳಂತೆ ವರ್ತಿಸದೆ ಅದನ್ನು ನಿರ್ಲಕ್ಷಿಸುತ್ತಿರುವುದರಿಂದ ಕಾರ್ಪೊರೇಷನ್ನನ್ನು ರದ್ದು ಪಡಿಸುವ ಸಂಭವವಿದೆಯೆನ್ನಲಾಗಿದೆ.

—

ಹೆಸರು ಬದಲಾವಣೆ

ಜಮ್ಮು— ಥಾಕೋಚಾಕ್ ಭಾರತ ಸೈನ್ಯದಿಂದ ಪುನರಾಕ್ರಮಿಸಲ್ಪಟ್ಟಿತು – ಈಗ ಅದಕ್ಕೆ ಹಿಂದಿನ ಚಾಕ್ ಥಾಕೋ ಎಂದು ಹೆಸರಿಡಲಾಗಿದೆ.

ವುಡ್‌ಲಾಂಡ್ಸ್ 15 12 72 ರಿಂದ
ಅಮೋಘ ಪ್ರಾರಂಭ

ಸೆವೆ ಆರ್ಟ್ಸ್ ಪಿಕ್ಚರ್ಸ್‌ರವರ ಹಿಂದಿ ವರ್ಣ ಚಿತ್ರ

ರಾಜಾ ಜಾನಿ

ಪ್ರತಿ ದಿನ 4 ಪ್ರದರ್ಶನಗಳು

ದಿನ ಬೆಳಿಗ್ಗೆ 10-30, ಮಧ್ಯಾಹ್ನ 2-45, ಸಂಜೆ 6-30, ರಾತ್ರಿ 9-45

ಪಾತ್ರ – ಧರ್ಮೇಂದ್ರ ಹೇಮಮಾಲಿನಿ ಪ್ರೇಂಚೋಪ್ರ ಪ್ರೇಂನಾಥ್
ಹೆಲ್ಪ ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್

ಸೂಚನೆ : ಬಾಲ್ಕನಿ ತರಗತಿಗಳಿಗೆ ದಿನ ಬೆಳಿಗ್ಗೆ 11-15 ರಿಂದ 12-15ರ ವರೆಗೆ ಮುಂಗಡ ಟಿಕೆಟ್ ಕೊಡಲಾಗುತ್ತದೆ

ಅಪೆರಾ 2 ನೇ ವಾರ

ಅತ್ಯಮೋಘ ಹಿಂದಿ ಕಲರ್ ಚಿತ್ರ

ಗಾಂವ್ ಹಮಾರ
ಷೆಹರ್ ತುಮಾರ

ಪಾತ್ರ : ರಾಜೇಂದ್ರ ಕುಮಾರ್ ರೇಖ ಸುಜಿತ ಕುಮಾರ್ ಲಲಿತಪವಾರ್
ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್ ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ
ಪೂರ್ಣ ನಿಷೇಧವಾಗಲಿ

SHAKTI
SUDHA

A Superb Tonic

Quality Printing Neat Binding

Lakshminarasimha Press

Sivarampet, Mysore 1

Protect the Cow



Help The Gorakshana

— Humanitarian Propoganda Monthly —

Edited Printed and Published by Dharmapracharanirata M S Krishna Rao (Proprietor) at the Satyavadi Press, Chamaraja puram, Mysore 4

Bank Road Bahusar, A Fair Price Shop in Actual Practice